<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಂಗಾರಪೇಟೆ.**</u>

**ಸಿ.ಸಿ. 2543/2022**

**ಫಿರ್ಯಾದಿದಾರರು** ಃ ರಾಜ್ಯಪರ ಪೋಲೀಸರು, ಬಂಗಾರಪೇಟೆ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿ** ಃ ವಸಂತ್ ಕುಮಾರ್,
ಬಿನ್ ಲೇಟ್ ರಾಜ್.ಜಿ., 37 ವರ್ಷ,
ವಾಸಃ ನಂ.30, 1 ನೇ ಕ್ರಾಸ್, ಅನುಗ್ರಹ ಲೇಔಟ್,
ಬಿ. ನಾರಾಯಣಪುರ. ಕೆ.ಆರ್. ಪುರಂ, ಬೆಂಗಳೂರು.

## ಆರೋಪಣೆ

ಬಂಗಾರಪೇಟೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಶ್ರೀ ಬಿ. ಕೇಶವಮೂರ್ತಿ, ಬಿ.ಎಲ್. ಎಲ್.ಎಲ್.ಬಿ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆ ಹೊರಿಸುತ್ತೇನೆ.

ದಿನಾಂಕ 16.09.2022 ರಂದು ಸಂಜೆ 6.15 ಗಂಟೆಯಲ್ಲಿ ಚಾಸಾ-1ರವರ ತಂದೆ ಶಿವಾನಂದ ರವರು ಮನೆಗೆ ಬರುವ ಸಲುವಾಗಿ ಗಂಗಾ ಎಸ್ಟೇಟ್ ನ ಮುಂಭಾಗ ತನ್ನ ಟಿವಿಎಸ್ ಹೆವಿ ಡ್ಯೂಟಿ ದ್ವಿಚಕ್ರ ವಾಹನ ಸಂಖ್ಯೆ- ಕೆಎ-04-ಕೆಎಫ್-2041 ನ್ನು ಕೋಲಾರ ಬಂಗಾರಪೇಟೆ ಮುಖ್ಯ ರಸ್ತೆಯ ಎಡ ಭಾಗದಲ್ಲಿ ಚಲಾಯಿಸಿಕೊಂಡು ಬರುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ವಾಹನ ಕಾರ್ ಸಂಖ್ಯೆ- ಕೆಎ-01-ಎಂ.ಟಿ-2823 ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು, ಟಿವಿಎಸ್ ಹೆವಿಡ್ಯೂಟಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಅಪಘಾತ ಮಾಡಿದ್ದು, ಈ ಪ್ರಕಾರ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ. 279 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಮಾಡಿರುತ್ತೀರಿ.

ಎರಡನೇಯದಾಗಿ ದಿನಾಂಕಃ 16.09.2022 ರಂದು ಸಂಜೆ 6.15 ಗಂಟೆಯಲ್ಲಿ ಚಾಸಾ-1 ರವರ ತಂದೆ ಶಿವಾನಂದ ರವರು ಮನೆಗೆ ಬರುವ ಸಲುವಾಗಿ ಗಂಗಾ ಎಸ್ಟೇಟ್ ನ ಮುಂಭಾಗ ತನ್ನ ಟಿವಿಎಸ್ ಹೆವಿ ಡ್ಯೂಟಿ ದ್ವಿಚಕ್ರ ವಾಹನ ಸಂಖ್ಯೆ- ಕೆಎ-04-ಕೆಎಫ್-2041 ನ್ನು ಕೋಲಾರ ಬಂಗಾರಪೇಟೆ ಮುಖ್ಯ ರಸ್ತೆಯ ಎಡ ಭಾಗದಲ್ಲಿ ಚಲಾಯಿಸಿಕೊಂಡು ಬರುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ವಾಹನ ಕಾರ್ ಸಂಖ್ಯೆ- ಕೆಎ-01-ಎಂ.ಟಿ-2823 ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು, ಟಿವಿಎಸ್ ಹೆವಿಡ್ಯೂಟಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಅವರು ವಾಹನ ಸಮೇತ ರಸ್ತೆಯ ಮೇಲೆ ಬಿದ್ದು, ತಲೆಯ ಹಿಂಭಾಗ, ಎಡ ಕಿವಿಯ ಬಳಿ, ಎಡಕೈಗೆ ರಕ್ತ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ

ಮೃತಪಟ್ಟಿರುತ್ತಾನೆಂದು, ಈ ಪ್ರಕಾರ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ. 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಮಾಡಿರುತ್ತೀರಿ ಎಂದು ಆಪಾದಿಸುತ್ತೇನೆ.

**ಪ್ರಶ್ನೆ ಃ 1.** ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ಆಪಾದನೆಯು ನಿಮಗೆ ತಿಳಿಯಿತೆ**?**

**ಉತ್ತರ ಃ**

**ಪ್ರಶ್ನೆ ಃ 2.** ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ**?**

**ಉತ್ತರ ಃ**

**(**ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ**,** ಹೇಳಿ**,** ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು.**)**

**ದಿನಾಂಕಃ 12.05.2023.**

**Sd/-**
**(ಕೇಶವಮೂರ್ತಿ.ಬಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ಬಂಗಾರಪೇಟೆ**